Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸಾ ಪಕರು— ಅರಮನೆ ಸಿರಸ್ತೆದಾರ್ ಎಂ ವಿ. ಸುಬ್ಬರಾಯುರು [2 ನಪೈ

16—10—1964

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಭ್ರೂಣಹತ್ಯೆ

ಭ್ರೂಣ ಹತ್ಯೆಯನ್ನು ಕಾನೂನುಬದ್ಧ ಮಾಡುವ ಸೂಚನೆಯೊಂದು ಸರ್ಕಾರಕ್ಕೆ ಬಂದಿದ್ದು, ಇಂದಿನವರೆಗೆ ಘೋರ ಪಾತಕವೆಂದಿದ್ದ ಭ್ರೂಣಹತ್ಯೆಯನ್ನು ಇನ್ನು ಪರಿಶೀಲಿಸಲು ಸರ್ಕಾರವು ಸಮಿತಿಯೊಂದನ್ನು ನೇಮಿಸಿದೆ : ಈ ಸಮಿತಿಯು ಅನುಕೂಲಾಭಿಪ್ರಾಯವುಳ್ಳದ್ದೇ ಆದರೆ ಭ್ರೂಣಹತ್ಯೆಯು ಇನ್ನು ಮುಂದೆ ಅಪರಾಧವೆಂದು ಹೇಳಲಾಗದು. (ಪ್ರ)

ನವದೆಹಲಿ— ಪುಲಪುರ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿನ ಶ್ರೀ ವಿಜಯಲಕ್ಷ್ಮಿ ಪಂಡಿತರು ಸ್ಪರ್ಧಿಸಬಹುದು

★

ಮಾಸ್ಕೋ— ಬಾಹ್ಯಾಕಾಶದಲ್ಲಿ 24 ಗಂಟೆ ಸುತ್ತಿ ಬಂದ ರಷ್ಯಾ 'ವೋಸ್ಕೋಡ್' ಒಳಗಿದ್ದ 3 ಮಂದಿಯೂ ಸುಖವಾಗಿ ಬಂದು ತಲಪಿಡರು.

★

ಬೊಂಬಾಯಿ— ಹಿಂದೆ ಮಹಾರಾಷ್ಟ್ರ ಶಾಸನ ಸಭೆಯಲ್ಲಿದ್ದ ಗೊಂದಲ ಸಂಬಂಧವಾಗಿ ಶಾಸನಸಭಾಸದಸ್ಯ ಜಾಂಬುವಂತರಾವ್ ಧೋತೆಯವರನ್ನು ನೆರ್ಷ ವಿಚಾರಣೆಗೆ ಒಳಪಡಿಸಲಾಗಿದೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಶ್ಯಕೃಷ್ಣ ಜೋಯಿಸರವರಿಂದ

17 ಶನಿವಾರ ಏಕಾದಶಿ ಶತಭಿಷ
ವಿಜಯದಶಮಿ, ಶಮೀಪೂಜೆ

★

ನಿನ್ನೆ ಆಯುಧ ಪೂಜೆ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ 'ರಜವಿತ್ತು

ಬೇಕಾದಷ್ಟಿದೆ

ಜೆಂಗಳೂರು— ಪೋಲೀಸರು ಕೆಲವು ಗೋಡೌನುಗಳ ತಪಾಸಣೆ ನಡೆಸಿದ್ದರಲ್ಲಿ, ಸರಕಾರದಲ್ಲಿ ಬೇಕಾದಷ್ಟು ಆಹಾರಧಾನ್ಯ ದಾಸ್ತಾನಿರುವದು ಕಂಡುಬಂದಿತು

★

ಪ್ರೇಮಿಗಳ ಆತ್ಮಹತ್ಯೆ

ಬೆಂಗಳೂರು— ವೆಂಕಟಸ್ವಾಮಿ ರವರ ಸೈಯ ಒಂದು ಭಾವಿಯಲ್ಲಿ 20 ವರ್ಷದ ಷಣ್ಮುಗಂ ಮತ್ತು 16 ವರ್ಷದ ಕೃಷ್ಣವೇಣಿಯರ ಶವ ಸಿಕ್ಕಿತು : ಈರ್ವರೂ ಪ್ರೇಮಿಗಳಾಗಿದ್ದು ಅವರ ತಂದೆತಾಯಿಗಳು ಬೈದು ಒಬ್ಬರೊಡನೆ ಮತ್ತೊಬ್ಬರು ಮಾತನಾಡಬಾರದೆಂದು ಛೀಮಾರಿ ಮಾಡಿದ್ದರು

★

ಜೀವಾವಧಿ ಶಿಕ್ಷೆನಂತರ

ನವದೆಹಲಿ— ಗಾಂಧೀಜೀ ಹತ್ಯೆಯ ದಲ್ಲಿ ಭಾಗವಹಿಸಿದ್ದ, ಜೀವಾವಧಿ ಶಿಕ್ಷೆ ವಿಧಿಸಲಾಗಿದ್ದ ಗೋಪಾಲ ವಿನಾಯಕ ಗೋಡ್ಸೆ ತಿಹಾರ್ (ದೆಹಲಿ) ಜೈಲಿನಿಂದ ಮೊನ್ನೆ ಬಿಡುಗಡೆ ಮಾಡಲ್ಪಟ್ಟನು — ಈತನ ಅಣ್ಣನು ಈ ಹತ್ಯಕಾರ್ಯಕ್ಕಾಗಿ 1950 ರಲ್ಲಿ ಅಂಜಾಲಾ ಕೇಂದ್ರ ಜೈಲಿನಲ್ಲಿ ನೇಣುಹಾಕಲ್ಪಟ್ಟನು.

★

ಲಕ್ನೊ— ಅಫ್ಘೋ ವಿಷ್ಯಾ ದೇಶಗಳಿಂದ ಭಾರತದ ಬೈಸಿಕಲ್ಲುಗಳಿಗೆ ಕೇಳಿಕೆ ಹೆಚ್ಚಾಗಿದೆ — ರೂ 5000000 ಕ್ಕೂ ಹೆಚ್ಚಿಗೆ ಆರ್ಡರುಗಳು ಬಂದಿವೆ ಎಂದು ವರದಿಯಾಗಿದೆ

★

ಬೊಂಬಾಯಿ— ಬುದ್ಧದೇವನ ಅವಶೇಷವನ್ನು ಕೈರೋ ಮೂಲಕ ಲಂಡನ್ನಿಗೆ ತೆಗೆದುಕೊಂಡು ಹೋಗಲಾಯಿತು ; ಅದು ಬುದ್ಧದೇವನ ಮೂಳೆಯ ಒಂದು ಕಣ್ಣ ಚೂರಾಗಿದ್ದು ಒಂದು ಕಾಣಿಸಿದೆ.

ಶಾಸನ ಸಭೆಗೆ ಕೆರಾನರ ರಾಜೀನಾಮೆ

ನವದೆಹಲಿ— ಮಾಜಿ ಪಂಜಾಬು ಮುಖ್ಯಮಂತ್ರಿ ಪ್ರತಾಪಸಿಂಗು ಕೈರಾನರು ಶಾಸನಸಭಾ ಸದಸ್ಯತ್ವಕ್ಕೆ ರಾಜೀನಾಮೆ ಇತ್ತಿರುವರು

ಅಯ್ಯೋಪಾಪ

ರಾಮನಗರ— ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಆಹಾರಧಾನ್ಯಕ್ಕಾಗಿ ಕಾದಿದ್ದ 200 ಮಂದಿ ಮಹಿಳೆಯರು ಅದು ಸಿಕ್ಕದಿರಲು, ತಾಲ್ಲೂಕು ಆಫೀಸಿಗೆ ವೆಂಕಟಗೌಡನಹಳ್ಳಿಗೆ ಹೋದಾಗ ಪೋಲೀಸರು ಜಜ್ಜಿರಿಸಿದರು ; ಮೂವರು ಪ್ರಜ್ಞೆಹೀನರಾಗಿ ಬಿದ್ದು ಚೇತರಿಸಿಕೊಂಡನಂತರ ವಿಷಯವೇನೆಂದು ಕೇಳಲಾಗಿ ಅವರು ಕಣ್ಣೀರು ಸುರಿಸಿದರು.

ಬೊಂಬಾಯಿ— ಪಶ್ಚಿಮ ರೈಲ್ವೆಯ ಒಂದು ಎಲೆಕ್ಟ್ರಿಕ್ ರೈಲು ಮತ್ತೊಂದಕ್ಕೆ ಬಡಿದು 4 ಮಂದಿ ಸತ್ತರು

.....

ನವದೆಹಲಿ— ಧೋತಿ, ಸ್ವೀರೆ, ಲಾಂಗರ್ಕ್ಲಾತು, ಪೆರ್ಟಿಂಗು ಮೇಲೆ ಬಿಲೆ ಮತ್ತು ಉತ್ಪಾದನೆ ಹತೋಟಿ ತಾ|| 20 ರಿಂದ ಜಾರಿಗೆ ಬರುವುದು.

.....

ಅಹಮದಾಬಾದು— ಒಟ್ಟಾರೆ ಬಟ್ಟೆ ವ್ಯಾಪಾರಿಗಳಲ್ಲಿ ಅಹಮದಾಬಾದು ಒಬ್ಬರಲ್ಲೇ ರೂ 15 ಕೋಟಿ ಬಿಲೆಯ ಒಂದೂವರೆ ಲಕ್ಷ ಬೇಲು ಒಟ್ಟೆ ಬಿದ್ದಿದೆ

ತುಮಕೂರು— ಹಿರೇಹಳ್ಳಿಯ ಬೆಟ್ಟಯ್ಯನೆಂಬವನ್ನು ಕ್ಷುದ್ರ ಜಗಳಕ್ಕಾಗಿ ತಂದೆಯನ್ನು ಕೊಲೆ ಮಾಡಿ ಶರೀರವನ್ನು ಒಂದು ಭಾವಿಗೆ ಹಾಕಿರುವುದು ಪತ್ತೆಯಾಗಿದೆ

—

ವಕಾರಣಾಸಿ— ಫುಲಿಪುರ ಉಪಚುನಾವಣೆಯಲ್ಲಿ ಜನಸಂಘ ಸ್ಪರ್ಧಿಸುವುದೆಂದು ತಂದಿಯಾಗಿದೆ

ಗೋಲೀ ಬಾರು

ಡಾಕಾ— ಸೆಣಬಿನ ಮಿಲ್ಲಿನ ಮುಷ್ಕರ್ತಿಸುಬಂಧವಾಗಿ ಪೋಲೀಸರ ಗೋಳೀಬಾರು ನಡೆದು 5 ಜನ ಸತ್ತರು,

ರೈಲ್ವೆಗಳಿಗೆ ಸಾಲಾ

ನವದೆಹಲಿ— ಭಾರತ ರೈಲ್ವೇಗಳಿಗೆ ವಿಶ್ವಬ್ಯಾಂಕು 62 ಮಿಲಿಯ ಡಾಲರು ಸಾಲಾ ನೀಡುವ ಸಂಭವವಿದೆ

★

ಬೊಂಬಾಯಿ— ರೂ 31000 ಬೆಲೆಯ ಕೈಗಡಿಯಾರಗಳನ್ನು ಕಳ್ಳಸ್ಮಗ್ಲಿಂಗ್ ಮಾಡಿಸಿಯು ಒಂದು ಅಂಗಡಿಯಲ್ಲಿ ವಶಪಡಿಸಿಕೊಳ್ಳಲಾಯಿತು

—

ಮದರಾಸು— ಸುಮಾರು ರೂ 1 ಲಕ್ಷ ಬೆಲೆಯ ಹತ್ತಿತ್ತು ತೋಟಗಳ 70 ಚಿನ್ನದ ಗಟ್ಟಿಗಳನ್ನು ಮದರಾಸು ವಿಮಾನ ನಿಲ್ದಾಣದಲ್ಲಿ ಮೊನ್ನೆ ಕಸ್ಟಮ್ಸು ಅಧಿಕಾರಿಗಳು ವಶಪಡಿಸಿಕೊಂಡರು : ಬೊಂಬಾಯಿನಿಂದ ಬಂದವನೊಬ್ಬನು ಸೈಕೋಟಿನಲ್ಲಿ ಮುಚ್ಚಿ ತಂದಿದ್ದನು.

—

ಮಡಿಕೇರಿ— ಕಳ್ಳರೆಯನ್ನು ಕಾಳ ಸಂತೆಯಲ್ಲಿ ಕಿಲೋಗೆ ರೂ 2-50 ಂತೆ ಮಾರುತ್ತಿದ್ದ ಅಮ್ಮತಿಯ ಖಾದಂ ದಸ್ಸಿಗಿ ಮಾಡಲ್ಪಟ್ಟನು

ಪುನರ್ಜನ್ಮ

ಮಧ್ಯಪ್ರದೇಶದ ಒಂದು ಹುಡುಗಿಯು ಪುನರ್ಜನ್ಮ ಪಡೆದಿರುವಳೆಂದೂ ಅವಳು ಮಾತನಾಡುವ ಭಾಷೆಯು ಅವಳ ತಂದೆತಾಯಿಗಳ ಭಾಷೆಗೆ ಬೇರೆಯಾಗಿರುವುದೆಂದೂ ವರದಿಯಾಗಿದೆ. ಭಾರತದಲ್ಲಿ ಪುನರ್ಜನ್ಮ ಕುರಿತು ವ್ಯಾಸಂಗ ಮಾಡುತ್ತಿರುವ ಅಮೇರಿಕಾದ ವರ್ಜಿನಿಯಾ ವಿಶ್ವವಿದ್ಯಾಲಯದ ಡಾ || ಈಶ್ವರ ಸನ್ನರು ಆಕೆಯನ್ನು ಸಂದರ್ಶಿಸಿದರು ; ಆಕೆಯು ಮಾತನಾಡುತ್ತಿರುವುದು ಹಿಂದಿನ ಜನ್ಮದಲ್ಲಿ ಮಾತನಾಡುತ್ತಿದ್ದ ಅಸ್ಸಾಂ ಭಾಷೆಯಾಗಿದ್ದು, ಈಗಿನ ಇವಳ ತಂದೆತಾಯಿಗಳು ಮಾತನಾಡುವ ಭಾಷೆ ಅದಲ್ಲವಾಗಿದೆ.

★

ಡೆಲ್ಹಿಯಲ್ಲಿ ಒಬ್ಬಾತನ ಪುನರ್ಜನ್ಮ : ಆತನು ಎರಡನೇ ವಿಶ್ವಯುದ್ಧದಲ್ಲಿ ಮಡಿದ ಒಬ್ಬ ಬ್ರಿಟೀಷು ಸೋಲ್ಜರ್ರಾಗಿರುವನು ; ಆತನಿಗೆ ಹಿಂದಿನ ಜನ್ಮದಲ್ಲಿ ಬಿದ್ದಿದ್ದ ಗುಂಡಿನೇಟಿನ ಗುರುತುಗಳಿವೆ ಎಂದು ಉತ್ತರ ಪ್ರದೇಶದ ಸೈಕಾಲಜಿ ಬೂರೋ ಡೈರೆಕ್ಟರು ಡಾ || ಜವಾಹರಾಪ್ರಸಾದರು ಹೇಳಿದರು ; ಆತನು ಹಿಂದೂ ಕುಟುಂಬದಲ್ಲಿ ಜನಿಸಿದ್ದರೂ, ಹಿಂದೂ ರೀತಿಯ ಆಹಾರ ಉಡುಪು ಆಸುಪಾಸು ಇಲ್ಲ : ಈಗಲೂ ಸೋಲ್ಜರಿನಂತೆ ಉಡುಪು ಧರಿಸಿ, ಊಟಮಾಡುವಾಗ ಚಾಕು ಮತ್ತು ಫೋರ್ಕು ಉಪಯೋಗಿಸಲು ಮೊಂಡಾಟಮಾಡುವನು : ಒಳ್ಳೇ ವಾಗ್ಜರಿಯ ಈಂಗ್ಲೀಷಿನಲ್ಲಿ, ತಾನು ಹಿಂದೆ ಯುದ್ಧದಲ್ಲಿ ಹೇಗೆ ಮಡಿದುದು ಎಂಬುದನ್ನು ವಿವರಿಸಿದನೆಂದೂ ಪ್ರಸಾದರು ಹೇಳಿದರು

ಎ ಬಿ ಪತ್ರಿಕಾ ವರದಿ [ಟ್ರೂತ್]

ಬಸವಾ ಮನೆಯಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 16 ರಂದು ಟೌನ್‌ಹಾಲಿನಲ್ಲಿ ಕ ರಿಂದ 9, ನ ಗಸ್ವೀರ್, ಕವಿ ಸಮ್ಮೇಳನ, ಲಘು ಸಂಗೀತ

4-30 ಜ ರಂ ಬೂ ಸ ವಾ ರಿ

ಎಗ್ಸಿಬಿಷನ್ನಿನಲ್ಲಿ ಬೆಳಿಗ್ಗೆ 10 ಗಂಟೆಗೆ ಕನ್ನಡ ಕಲಾವಿದರಿಗೆ ಸನ್ಮಾನ

ಸಂಜೆ 6 ರಿಂದ ನಾಗಸ್ವರ. ನೃತ್ಯ.

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.
ಗೋರಕ್ಷಣಕ್ಕೆ ಲೇಖನಗಳು, ಚಂದಾ ಸಹಾಯದ್ರವ್ಯಗಳನ್ನೂ ಸ್ವೀಕರಿಸಲಾಗುತ್ತೆ.
ಸಹಾಯಕರ ಹೆಸರನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತೆ.
ರೂ. 10 ಕ್ಕೆ ಮೇಲ್ಪಟ್ಟು ಕೊಟ್ಟವರಿಗೆ 'ಗೋರಕ್ಷಣ' ಕಳುಹಿಸಲಾಗುತ್ತಿರುವುದು
ವಿಳಾಸ— ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ ವೈಭವ 5 ನೇ ವಾರ

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— 10-10-64 ರಿಂದ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ತಾರೆ— ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ. ಬಾಲಾಜಿ, ಸುಕುಮಾರಿ, ಅಶೋಕ್.

ರಣಜಿತ್‌ನಲ್ಲಿ— ಜನಪ್ರಿಯ 3 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata, M. S. Krishna Rao at the Satyavadi Press, Chamarajapuram, Mysore 4